ಕರ್ನಾಟಕ ಸರ್ಕಾರ

# ನಿರ್ದೇಶಕರ ಕಚೇರಿ, ಪದವಿ ಪೂರ್ವ ಶಿಕ್ಷಣ ಇಲಾಖೆ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು.

Email Id: commissioner.pue @gmail.com Phone No: 080-23562033

ಸಂಖ್ಯೆ:ಪಪೂಶಿಇ/ಅ.ವಿ-3/ವಿ.ನಿ-5/ಉ.ವರ್ಗಾ/2022-23 ದಿನಾಂಕ: 27-07-2022.

## ಜ್ಞಾಪನ

ವಿಷಯ:- 2022-23ನೇ ಶೈಕ್ಷಣಿಕ ಸಾಲಿನಲ್ಲಿ ನಡೆಯುವ ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ಉಪನ್ಯಾಸಕರ ಕೋರಿಕೆ ವರ್ಗಾವಣೆ ಕೌನ್ಸಲಿಂಗ್‌ಗಾಗಿ ಸಲ್ಲಿಸಲಾಗಿದ್ದ ಆನ್-ಲೈನ್ ಅರ್ಜಿಯಲ್ಲಿ ಅರ್ಹ ಮತ್ತು ಅನರ್ಹಗೊಂಡಿದ್ದ ಅರ್ಜಿಗಳಿಗೆ ಆಕ್ಷೇಪಣೆ ಕರೆಯುವ ಬಗ್ಗೆ.

ಉಲ್ಲೇಖ:-1. ಸರ್ಕಾರದ ಅಧಿಸೂಚನೆ ಸಂಖ್ಯೆ: ಸಂವ್ಯಶಾಇ 12 ಶಾಸನ 2020, ದಿನಾಂಕ: 27-03-2020.
2. ಸರ್ಕಾರದ ಅಧಿಸೂಚನೆ ಸಂಖ್ಯೆ: ಸಂವ್ಯಶಾಇ 47 ಶಾಸನ 2021, ದಿನಾಂಕ: 18-01-2022.
3. ಸರ್ಕಾರದ ಅಧಿಸೂಚನೆ ಸಂಖ್ಯೆ: ಇಪಿ 32 ಟಿಪಿಯು 2021, ದಿನಾಂಕ: 12-05-2022.
4. ಈ ಕಚೇರಿ ಸಮಸಂಖ್ಯೆ ವರ್ಗಾವಣಾ ಮಾರ್ಗಸೂಚಿ ದಿನಾಂಕ:18-05-2022.
5. ಈ ಕಚೇರಿ ಸಮಸಂಖ್ಯೆ ಜ್ಞಾಪನ ದಿನಾಂಕ: 20-07-2022.

* * *

ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ಉಪನ್ಯಾಸಕರ 2022-23ನೇ ಶೈಕ್ಷಣಿಕ ಸಾಲಿನ ವರ್ಗಾವಣೆ ಕೌನ್ಸಲಿಂಗ್‌ಗಾಗಿ ಆನ್-ಲೈನ್ ಮೂಲಕ ಅರ್ಜಿ ಸಲ್ಲಿಸಲು ಉಲ್ಲೇಖ-1 ರಿಂದ 4ರಂತೆ ಅವಕಾಶ ಕಲ್ಪಿಸಲಾಗಿದೆ. ಅದರಂತೆ, ವಿವಿಧ ವಿಷಯಗಳ ಉಪನ್ಯಾಸಕರುಗಳು ಸಲ್ಲಿಸಲಾಗಿದ್ದ 3082 ಆನ್-ಲೈನ್ ಅರ್ಜಿಗಳನ್ನು ಪರಿಶೀಲಿಸಲಾಗಿ, ಅಪೂರ್ಣ ದಾಖಲೆಗಳನ್ನು ಸಲ್ಲಿಸಲಾಗಿದ್ದ 377 ಅರ್ಜಿಗಳನ್ನು ಜಿಲ್ಲಾ ಉಪ ನಿರ್ದೇಶಕರ ಕಚೇರಿಗೆ ಕಳುಹಿಸಿ, ಸದರಿ ಆಕ್ಷೇಪಣೆಗಳನ್ನು ಸರಿಪಡಿಸಿ ಅರ್ಹ/ಅನರ್ಹ ಅರ್ಜಿಗಳನ್ನು ಪರಿಶೀಲಿಸಿ ಸಲ್ಲಿಸುವಂತೆ ಉಲ್ಲೇಖ-3ರಂತೆ ಕೋರಲಾಗಿತ್ತು.

ಅದರಂತೆ, ಜಿಲ್ಲಾ ಉಪನಿರ್ದೇಶಕರು, ಅಪೂರ್ಣ ದಾಖಲೆಗಳಿಂದ ಆಕ್ಷೇಪಿತವಾಗಿದ್ದ 377 ಅರ್ಜಿಗಳಿಗೆ ಸಂಬಂಧಿಸಿದ ಉಪನ್ಯಾಸಕರು/ಪ್ರಾಂಶುಪಾಲರುಗಳಿಂದ ಪೂರಕ ಮಾಹಿತಿಯನ್ನು ಪಡೆದು ಅರ್ಹ ಮತ್ತು ಅನರ್ಹ ಅರ್ಜಿಗಳನ್ನು ಪ್ರತ್ಯೇಕಿಸಿ ಪಟ್ಟಿಯನ್ನು ಸಲ್ಲಿಸಿರುತ್ತಾರೆ. ಜಿಲ್ಲಾ ಉಪನಿರ್ದೇಶಕರು ನೀಡಿರುವ ವರದಿಯನ್ವಯ ಅರ್ಹ ಮತ್ತು ಅನರ್ಹ ಪಟ್ಟಿಯನ್ನು ಪ್ರಕಟಿಸಲಾಗಿದೆ. ಪ್ರಕಟಿಸಲಾದ ಅರ್ಹ ಮತ್ತು ಅನರ್ಹ ಪಟ್ಟಿಗೆ ಸಂಬಂಧಿಸಿದಂತೆ, ಆಕ್ಷೇಪಣೆಗಳೇನಾದರೂ ಇದ್ದಲ್ಲಿ, ಸಂಬಂಧಿಸಿದ ಉಪನ್ಯಾಸಕರು ಕಾಲೇಜಿನ ಪ್ರಾಂಶುಪಾಲರಿಗೆ, ಪ್ರಾಂಶುಪಾಲರು ಆಕ್ಷೇಪಣೆಯನ್ನು ಜಿಲ್ಲಾ ಉಪನಿರ್ದೇಶಕರಿಗೆ ಸಲ್ಲಿಸತಕ್ಕದ್ದು. ಪರಿಶೀಲಿಸಿದ ನಂತರ, ಮಾಹಿತಿಯನ್ನು ಅಗತ್ಯ ದಾಖಲೆಗಳೊಂದಿಗೆ ಕಚೇರಿಯ ಅಧೀಕ್ಷಕರು/ವಿಷಯ ನಿರ್ವಾಹಕರ ಮುಖಾಂತರ ದಿನಾಂಕ: 30-07-2022ರ ಸಂಜೆ 5-00ರ ಒಳಗಾಗಿ ಜಂಟಿ ನಿರ್ದೇಶಕರು (ಆಡಳಿತ), ಪದವಿ ಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು, ಇವರಿಗೆ ಸಲ್ಲಿಸಲು ತಿಳಿಸಿದೆ.

ನಿರ್ದೇಶಕರು,
ಪದವಿ ಪೂರ್ವ ಶಿಕ್ಷಣ ಇಲಾಖೆ.

ರವರಿಗೆ:

1. ರಾಜ್ಯದ ಎಲ್ಲಾ ಜಿಲ್ಲಾ ಉಪನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಇವರುಗಳಿಗೆ - ಮಾಹಿತಿಗಾಗಿ ಹಾಗೂ ಅಗತ್ಯ ಕ್ರಮಕ್ಕಾಗಿ.
2. ಸರ್ಕಾರಿ ಪದವಿ ಪೂರ್ವ ಕಾಲೇಜಿನ ಎಲ್ಲಾ ಪ್ರಾಂಶುಪಾಲರಿಗೆ ಹಾಗೂ ಉಪನ್ಯಾಸಕರಿಗೆ - ಮಾಹಿತಿಗಾಗಿ ಹಾಗೂ ಅಗತ್ಯ ಕ್ರಮಕ್ಕಾಗಿ.
3. ಕಚೇರಿ/ಹೆಚ್ಚುವರಿ ಪ್ರತಿ.